# ಸ್ಟ್ರೀಟ್ ವ್ಯೂ ಮತ್ತೆ ಆರಂಭ

■ ಶಶಿಕುಮಾರ್ ಸಿ.




ಭದ್ರತಾ ಕಾರಣಕ್ಕೆ ಸ್ಥಗಿತಗೊಂಡಿದ್ದ ಗೂಗಲ್ ಮ್ಯಾಪ್ಸ್‌ನ ಸ್ಟ್ರೀಟ್‌ವ್ಯೂ ಸೇವೆ ಮತ್ತೆ ಶುರುವಾಗಿದೆ. ಸಾರ್ವಜನಿಕರು ಅಥವಾ ವಾಹನ ಸವಾರರಿಗೆ ಇದರಿಂದ ಸಾಕಷ್ಟು ಅನುಕೂಲವಾಗಲಿದೆ.

ಗೂಗಲ್ ಮ್ಯಾಪ್ಸ್‌ನಲ್ಲಿ ಲಭ್ಯವಾಗುವ ಸ್ಟ್ರೀಟ್‌ವ್ಯೂ ಸೇವೆಯನ್ನು ಬೆಂಗಳೂರು ಸೇರಿದಂತೆ ಹತ್ತು ನಗರಗಳಲ್ಲಿ ಮತ್ತೆ ಆರಂಭಿಸಿರುವ ಬಗ್ಗೆ ಗೂಗಲ್ ಕಂಪನಿಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಜೆನೆಸಿಸ್ ಇಂಟರ್‌ನ್ಯಾಷನಲ್ ಮತ್ತು ಟೆಕ್ ಮಹೀಂದ್ರ ಜೊತೆ ಪಾಲುದಾರಿಕೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಗೂಗಲ್ ಈ ಸೇವೆಯನ್ನು ಮತ್ತೆ ಆರಂಭಿಸಿದೆ.

'ರಸ್ತೆಗಳು ಹಾಗೂ ಇತರ ಪ್ರದೇಶಗಳ ದೃಶ್ಯಾವಳಿಗಳನ್ನು ತೋರಿಸುವುದರಿಂದ ದೇಶದ ಆಂತರಿಕ ಭದ್ರತೆಗೆ ತೊಂದರೆಯಾಗುತ್ತದೆ' ಎಂಬ ಕಾರಣಕ್ಕೆ ಕೇಂದ್ರ ಸರ್ಕಾರವು ಈ ಸೇವೆಯನ್ನು ಸ್ಥಗಿತಗೊಳಿಸುವಂತೆ ಗೂಗಲ್‌ಗೆ ಸೂಚಿಸಿತ್ತು. ಅದರಂತೆ ಗೂಗಲ್ ಕಂಪನಿಯು ಅನಿವಾರ್ಯವಾಗಿ ತನ್ನ ಸ್ಟ್ರೀಟ್ ವ್ಯೂ ಸೇವೆಯನ್ನು ಸ್ಥಗಿತಗೊಳಿಸಿತ್ತು. ಈ ವರ್ಷಾಂತ್ಯದ ವೇಳೆಗೆ 50ಕ್ಕೂ ಹೆಚ್ಚು ನಗರಗಳಲ್ಲಿ ಸ್ಟ್ರೀಟ್ ವ್ಯೂ ಸೌಲಭ್ಯ ಒದಗಿಸುವ ಯೋಜನೆಯನ್ನು ಗೂಗಲ್ ಹೊಂದಿದೆ.

ಪ್ರತಿ ಸ್ಥಳದ ರಸ್ತೆಗಳು ಮತ್ತು ಇತರ ಪ್ರದೇಶಗಳ 'ಹೈ ಡೆಫಿನಿಷನ್' ಚಿತ್ರಗಳನ್ನು ಸ್ಟ್ರೀಟ್ ವ್ಯೂನಲ್ಲಿ ಬಿತ್ತರಿಸಲಾಗುತ್ತಿತ್ತು. ಇದರಿಂದ ಒಂದೆಡೆ ಈ ಸೇವೆಯನ್ನು ಬಳಸುತ್ತಿದ್ದವರು ಅನುಕೂಲ ಪಡೆಯುತ್ತಿದ್ದರೆ, ಮತ್ತೊಂದೆಡೆ ಭದ್ರತಾ ಕಾರಣಕ್ಕೆ ಆಪತ್ತು ಎದುರಾಗುತ್ತಿತ್ತು. ಈ ಅಂಶವನ್ನು ಮನಗಂಡು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರ್ಕಾರವು ಸ್ಟ್ರೀಟ್ ವ್ಯೂ ಸೇವೆಗೆ ಕಡಿವಾಣ ಹಾಕಿತು.

'ಬೆಂಗಳೂರು, ಚೆನ್ನೈ, ದೆಹಲಿ, ಮುಂಬೈ, ಹೈದರಾಬಾದ್, ಪುಣೆ, ನಾಸಿಕ್, ವಡೋದರ, ಅಹ್ಮದ್ ನಗರ ಹಾಗೂ ಅಮೃತಸರ ಒಳಗೊಂಡಂತೆ ಭಾರತದ 1,50,000 ಕಿ.ಮೀ. ವ್ಯಾಪ್ತಿಯ ಪ್ರದೇಶಗಳ ಹೊಸ ಚಿತ್ರಣ ಮ್ಯಾಪ್ಸ್‌ನಲ್ಲಿ ಲಭ್ಯವಾಗಲಿದೆ. ಸಹಭಾಗಿತ್ವ ಹೊಂದಿದ ಸ್ಥಳೀಯ ಸಂಸ್ಥೆಗಳು ಅನುಮತಿ ಪಡೆದ ಚಿತ್ರಗಳು ಮಾತ್ರ ಸ್ಟ್ರೀಟ್ ವ್ಯೂನಲ್ಲಿ ಕಾಣಿಸಲಿವೆ' ಎಂದು ಪ್ರಕಟಣೆ ತಿಳಿಸಿದೆ.

ಈ ಯೋಜನೆಯನ್ನು 2022ರ ಅಂತ್ಯದ ವೇಳೆಗೆ ದೇಶದ ಇನ್ನೂ 50 ನಗರಗಳಿಗೆ ವಿಸ್ತರಿಸಲು ಗೂಗಲ್, ಜೆನೆಸಿಸ್ ಇಂಟರ್‌ನ್ಯಾಷನಲ್ ಹಾಗೂ ಟೆಕ್ ಮಹಿಂದ್ರಾ ಚಿಂತನೆ ನಡೆಸಿದೆ. ಸ್ಥಳೀಯ ಸಹಭಾಗಿತ್ವದೊಂದಿಗೆ ಗೂಗಲ್ ಸ್ಟ್ರೀಟ್ ವ್ಯೂ ಸೇವೆ ನೀಡುತ್ತಿರುವುದು ಇಡೀ ವಿಶ್ವದಲ್ಲೇ ಇದೇ ಮೊದಲು ಎಂಬುದು ಗಮನಾರ್ಹ ವಿಚಾರ.

## ಏನೀ ಸ್ಟೀಟ್ ವ್ಯೂ?

ಯಾವುದೇ ಪ್ರಮುಖ ರಸ್ತೆ, ಪ್ರವಾಸಿ ಸ್ಥಳ, ಬೆಟ್ಟ–ಗುಡ್ಡ, ನದಿ ಇತ್ಯಾದಿಗಳ 360 ಡಿಗ್ರಿ ಕೋನದ 'ಹೈ ಡೆಫಿನಿಷನ್' ಚಿತ್ರಗಳನ್ನು ಗೂಗಲ್ ಸ್ಟ್ರೀಟ್ ವ್ಯೂ ಒದಗಿಸುತ್ತಿತ್ತು. ನಿರ್ದಿಷ್ಟ ಸ್ಥಳದ 360 ಡಿಗ್ರಿ ಪನೋರಮಿಕ್ ಹಾಗೂ ಸ್ಟ್ರೀಟ್ ಲೆವೆಲ್ 3ಡಿ ಚಿತ್ರಗಳನ್ನು ಒಳಗೊಂಡ ಈ ಸೇವೆಯಿಂದ ಅನೇಕರು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಈ ಕಾರಣಕ್ಕೆ ನಿಷೇಧ ಹೇರಿದ್ದ ಕೇಂದ್ರ ಸರ್ಕಾರವು ಈಗ ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿದೆ. ಅಮೆರಿಕದ ಕೆಲವು ನಗರಗಳ ಸ್ಥಳಗಳು ಮತ್ತು ರಸ್ತೆಗಳ 360 ಡಿಗ್ರಿ ಪನೋರಮಿಕ್ ಸ್ಟ್ರೀಟ್ ವ್ಯೂ ಚಿತ್ರಗಳನ್ನು ಒದಗಿಸುವ ಈ ಸೇವೆಯನ್ನು 2007ರಲ್ಲಿ ಪರಿಚಯಿಸಲಾಗಿತ್ತು.

ಗೂಗಲ್ ಮ್ಯಾಪ್‌ನಲ್ಲಿರುವ ಪೆಗ್‌ಮ್ಯಾನ್ ಅನ್ನು ಕ್ಲಿಕ್ ಮಾಡಿದರೆ ನೀಲಿ ರೇಖೆಗಳು ಅಥವಾ ಬಿಂದುಗಳು ಕಾಣಿಸಿಕೊಳ್ಳುತ್ತದೆ. ಆ ಜಾಗದಲ್ಲಿ ಮತ್ತೊಮ್ಮೆ ಕ್ಲಿಕ್ ಮಾಡಿದರೆ ಸ್ಟ್ರೀಟ್ ವ್ಯೂ ಕಾಣಿಸುತ್ತದೆ. ಭದ್ರತಾ ಕಳವಳ ಇರುವ ಪ್ರದೇಶಗಳನ್ನು ಮಬ್ಬಾಗಿಸಿ ತೋರಿಸಲಾಗುತ್ತಿದೆ.

## ವೇಗದ ಮಿತಿ ಮಾಹಿತಿ ಲಭ್ಯ

ಗೂಗಲ್ ಮ್ಯಾಪ್ಸ್‌ನಲ್ಲಿ ಇನ್ನು ಮುಂದೆ ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿನ ವೇಗದ ಮಿತಿಯ ವಿವರಗಳೂ ಲಭ್ಯವಾಗಲಿವೆ. ಇದಕ್ಕಾಗಿ ಗೂಗಲ್ ಕಂಪನಿಯು ಬೆಂಗಳೂರು ಸಂಚಾರ ಪೊಲೀಸರ ಜೊತೆ ಒಪ್ಪಂದ ಮಾಡಿಕೊಂಡಿದೆ. ಬೆಂಗಳೂರಿನ ಸಂಚಾರ ವಿಭಾಗದಿಂದ ಪಡೆದ ದತ್ತಾಂಶಗಳ ಆಧಾರದಲ್ಲಿ ವೇಗದ ಮಿತಿಯ ಮಾಹಿತಿ ನೀಡುವ ಸೇವೆಯನ್ನೂ ಗೂಗಲ್ ಆರಂಭಿಸಲಿದೆ. ಈ ನಿಟ್ಟಿನಲ್ಲಿ ಬೆಂಗಳೂರು ಸಂಚಾರ ಪೊಲೀಸರ ಜತೆ ಸಹಭಾಗಿತ್ವ ಹೊಂದುವುದಾಗಿ ಗೂಗಲ್ ಹೇಳಿದೆ.

ಅಂದರೆ ಬೆಂಗಳೂರಿನ ರಸ್ತೆಗಳಲ್ಲಿನ ವಾಹನ ಸಂಚಾರದ ಮೇಲೆ ನಿಗಾವಹಿಸುವ ಗೂಗಲ್ ಯಾವ ರಸ್ತೆಯಲ್ಲಿ ಎಷ್ಟರ ಮಟ್ಟಿಗೆ ಟ್ರಾಫಿಕ್ ಜಾಮ್ ಇದೆ ಎನ್ನುವುದನ್ನು ಸೂಚಿಸುವುದಲ್ಲದೇ ಆ ರಸ್ತೆಯಲ್ಲಿ ಯಾವ ವೇಗದಲ್ಲಿ ವಾಹನ ಚಲಾಯಿಸಬೇಕು ಎಂಬುದನ್ನು ಚಾಲಕನನ್ನು ಎಚ್ಚರಿಸುತ್ತದೆ.

## ಅತಿ ವೇಗ, 'ಮ್ಯಾಪ್ಸ್' ನಿಗಾ!

ವಾಹನಗಳ ಅತಿವೇಗ ಚಾಲನೆ ಬಗ್ಗೆ ನಿಗಾವಹಿಸಿ, ಚಾಲಕನಿಗೆ ಆ ಬಗ್ಗೆ ಎಚ್ಚರಿಸುವ ಸೇವೆಯನ್ನು ಗೂಗಲ್ ಮ್ಯಾಪ್ಸ್ ಒದಗಿಸುತ್ತದೆ. ಆಂಡ್ರಾಯ್ಡ್ ಬಳಕೆದಾರರು ಗೂಗಲ್ ಮ್ಯಾಪ್ಸ್ ಅಪ್ಲಿಕೇಷನ್ ಬಳಸಿ ವಾಹನ ಚಲಾಯಿಸುವಾಗ ಅವರ ಮೊಬೈಲ್ ಪರದೆಯ ಮೇಲೆ ಸ್ಪೀಡೋಮೀಟರ್ ಸೇರಿಸಲು ಅನುಮತಿಸುತ್ತದೆ.

ಈ ಫೀಚರ್ ಪೂರ್ವನಿಯೋಜಿತವಾಗಿ ಸಕ್ರಿಯವಾಗಿರುವುದಿಲ್ಲ. ಬದಲಿಗೆ ಬಳಕೆದಾರರು ಗೂಗಲ್ ಮ್ಯಾಪ್ಸ್‌ನ ಸೆಟ್ಟಿಂಗ್ಸ್‌ಗೆ ಹೋಗಿ ಆಯ್ಕೆಗಳನ್ನು ಸೆಟ್ ಮಾಡಿಕೊಳ್ಳಬೇಕು. ರಸ್ತೆಗಳ ವೇಗದ ಮಿತಿ ಬಗ್ಗೆ ಗೂಗಲ್ ಮ್ಯಾಪ್ಸ್ ಮಾಹಿತಿ ಹೊಂದಿದ್ದು, ಆ ವೇಗದ ಮಿತಿಯನ್ನು ಚಾಲಕರು ದಾಟಿದಾಗ ತಾನಾಗಿಯೇ ಸ್ಪೀಡೋಮೀಟರ್ ಎಚ್ಚರಿಸುತ್ತದೆ. ಇದರಿಂದ ಸಂಚಾರ ನಿಯಮ ಉಲ್ಲಂಘಿಸಿದ ಆರೋಪದಡಿ ಸಂಚಾರ ಪೊಲೀಸರಿಗೆ ಸಿಕ್ಕಿಬೀಳುವುದು, ಅಪಘಾತಕ್ಕೀಡಾಗುವುದನ್ನು ತಡೆಯಬಹುದು ಎಂದಿದೆ ಗೂಗಲ್. ■